# ಸೋಲೊಮನ್ ನ್ಯಾಯ

ಸಾಮಾನ್ಯವಾಗಿ ತಾಯ್ತನದ ಪ್ರಶ್ನೆ ಬಂದಾಗ ನಮ್ಮ ಜನಪದರು ಹೇಳುವ ಸಾಮಾನ್ಯ ಮಾತೆಂದರೆ 'ಉತ್ತಲ್ಲದೆ ಮಣ್ಣಲ್ಲ, ಹೆತ್ತಲ್ಲದೆ ಹೆಣ್ಣಲ್ಲ'. ಹೆಣ್ಣು ಸಾಂಸಾರಿಕ ಜೀವನದ ಪಕ್ವತೆ ಪಡೆಯುವುದೇ ಹೆತ್ತ ನಂತರ ಎಂಬುದನ್ನು ಸಹ ನಂಬಲಾಗಿದೆ. ಇದು ಪಶು, ಪಕ್ಷಿಯಾದಿಯಾಗಿ ಪಾಲಿಸುವ ಪ್ರಕೃತಿಯ ಧರ್ಮ. ಈ ತಾಯಿಯನ್ನು ಭೂಮಿಗೂ ಸಹ ಹೋಲಿಸಲಾಗಿದೆ. ಮನುಕುಲದಿಂದ ನಿರಂತರ ದಾಳಿಗೆ ಒಳಗಾಗಿಯೂ ಸಹ ಅವಳು ಮಾನವನನ್ನು ಪೊರೆಯುವುದನ್ನು ಬಿಟ್ಟಿಲ್ಲ. ಹೀಗಾಗಿ ಭಾರತೀಯ ಪರಂಪರೆಯಲ್ಲಿ ಹೆತ್ತ ತಾಯಿ ಹಾಗೂ ಹೊತ್ತ ಭೂಮಿಗೆ ವಿಶಿಷ್ಟ ಸ್ಥಾನವಿದೆ.

ಬೈಬಲ್ ಸೋಲೊಮನ್ನನ ಕತೆ ವಿಶಿಷ್ಟವಾದುದು. ಯಹೂದಿಗಳ ಮೊದಲ ದೊರೆ ಸಾಲ್. ಸಾಲ್ ನಂತರ ಅರಸನಾದವನು ಡೇವಿಡ್. ಡೇವಿಡ್ ನಂತರ ಅವನ ಮಗ ಸೋಲೊಮನ್. ಎಲ್ಲ ಲೌಕಿಕ ಭೋಗಗಳನ್ನು ಅನುಭವಿಸುತ್ತಲೇ ತನ್ನ ರಾಜಧಾನಿ ಜೆರುಸಲೇಮ್ ನ್ನು ಅತ್ಯಂತ ಶ್ರೀಮಂತ ನಗರವನ್ನಾಗಿಸಿದ. ಏಳುನೂರು ಪತ್ನಿಯರು ಹಾಗೂ ಮುನ್ನೂರು ಉಪಪತ್ನಿಯರನ್ನು ಹೊಂದಿದ್ದ ದೊರೆ. ತನ್ನ ಜನಾಂಗದ ದೈವವಾದ ಯೆಹೋವ ಕನಸಿನಲ್ಲಿ ಕಾಣಿಸಿಕೊಂಡು ಯಾವ ವರ ಬೇಕು ಕೇಳಿಕೋ ಎಂದು ಕೇಳುತ್ತಾನೆ. ಆಗ ಸೋಲೊಮನ್ ಯಹೂದಿಗಳ ಸಂತತಿ ವಿಸ್ತಾರವಾದದ್ದು. ಇವರನ್ನು ಆಳುವುದಕ್ಕೂ, ನ್ಯಾಯಾನ್ಯಾಯಗಳನ್ನು ನಿರ್ಧರಿಸುವುದಕ್ಕೂ ಅಗತ್ಯವಿರುವ ವಿವೇಕವನ್ನು ದಯಪಾಲಿಸು ಎಂದು ಬೇಡಿಕೊಳ್ಳುತ್ತಾನೆ. ನಿದ್ದೆಯಿಂದ ಎದ್ದ ನಂತರ ಅದನ್ನು ಕನಸೆಂದು ತಿಳಿದು ಸಿದ್ಧನಾಗಿ ಆಸ್ಥಾನಕ್ಕೆ ಹೋಗುತ್ತಾನೆ.

ಇದೇ ಸಂದರ್ಭದಲ್ಲಿ ಇಬ್ಬರು ವೇಶ್ಯೆಯರು ಬಂದು ನ್ಯಾಯತೀರ್ಮಾನ ಕೇಳುತ್ತಾರೆ. ನಾನು, ಇವಳು ಒಂದೇ ಮನೆಯಲ್ಲಿ ವಾಸಿಸುತ್ತೇವೆ. ಇವಳು ಮೊದಲು ಮಗುವನ್ನು ಹೆತ್ತಳು. ಇವಳು ಹೆತ್ತ ಮೂರು ದಿನಕ್ಕೆ ನಾನೊಂದು ಮಗುವನ್ನು ಹೆತ್ತೆನು. ಇವಳು ಕಳೆದ ರಾತ್ರಿ ಮಲಗಿದ್ದಾಗ ತನ್ನ ಮಗುವಿನ ಮೇಲೆ ಹೊರಳಿ ಆ ಮಗು ಸತ್ತು ಹೋಯಿತು. ಬೆಳಿಗ್ಗೆ ಎದ್ದು ನೋಡಿದರೆ ಸತ್ತ ಅವಳ ಮಗು ನನ್ನ ಪಕ್ಕದಲ್ಲಿದೆ. ಸತ್ತ ಮಗುವನ್ನು ನನ್ನ ಪಕ್ಕದಲ್ಲಿರಿಸಿ ಬದುಕಿದ ಮಗು ತನ್ನದೆಂದು ಇವಳು ಸುಳ್ಳು ಹೇಳುತ್ತಿದ್ದಾಳೆ. ಆಗ ಇನ್ನೊಬ್ಬ ವೇಶ್ಯೆ ಅರಸನೇ ಇವಳು ಸುಳ್ಳು ಹೇಳುತ್ತಿದ್ದಾಳೆ. ಬದುಕಿರುವ ಮಗು ನನ್ನದು, ಸತ್ತಿರುವ ಮಗು ಇವಳದು ಎಂದು ವಾದ ಮಾಡಲಾರಂಭಿಸುತ್ತಾರೆ. ಸ್ವಲ್ಪ ಹೊತ್ತು ಯೋಚಿಸಿದ ಸೋಲೋಮನ್ ಸೇವಕನನ್ನು ಕರೆದು ಹರಿತವಾದ ಕತ್ತಿ ತರುವಂತೆ ಹೇಳುತ್ತಾನೆ. ಜೀವದಿಂದಿರುವ ಈ ಕೂಸನ್ನು ಎರಡು ಭಾಗ ಮಾಡು, ಇಬ್ಬರೂ ತೆಗೆದಿಕೊಳ್ಳಲಿ ಎನ್ನುತ್ತಾನೆ. ಆಗ ಆ ಮಗುವಿನ ತಾಯಿ ಅಳುತ್ತಾ ಬೇಡ, ಬೇಡ ಆ ಮಗುವನ್ನು ಅವಳಿಗೇ ಕೊಡಿ. ಮಗುವನ್ನು ಕೊಲ್ಲಬೇಡಿ, ಅದು ಚೆನ್ನಾಗಿದ್ದರೆ ಸಾಕು ಎಂದು ಕಣ್ಣೀರುಡುತ್ತಾಳೆ. ಆ ಮಗುವಿನ ತಾಯಲ್ಲದವಳು ಬೇಡ, ಬೇಡ ಮಗುವನ್ನು ಕತ್ತರಿಸಿ ಸಮಪಾಲು ಮಾಡಿ ಎನ್ನುತ್ತಾಳೆ. ಇದರಿಂದ ಸತ್ಯವರಿತ ಸೋಲೊಮನ್ ಮಗುವನ್ನು ನಿಜವಾದ ತಾಯಿಗೇ ಕೊಡಿಸುತ್ತಾನೆ. ಯಹೂದಿಗಳು ತಮ್ಮ ಅರಸನ ವಿವೇಕವನ್ನು ಹೊಗಳುತ್ತಾರೆ. ತಾನು ಕೊಟ್ಟ ತೀರ್ಮಾನ ಹಾಗೂ ಕನಸಿನಲ್ಲಿ ಬಂದ ದೈವದ ಪ್ರೇರಣೆಯ ಬಗ್ಗೆ ಅರಸ ಚಕಿತನಾಗುತ್ತಾನೆ. ಸೋಲೊಮನ್ ತನ್ನ ನ್ಯಾಯ ತೀರ್ಮಾನಗಳಿಂದಾಗಿಯೇ ಚರಿತ್ರೆಯಲ್ಲಿ ಪ್ರಖ್ಯಾತನಾಗುತ್ತಾನೆ.

ಇದೇ ವಸ್ತುವನ್ನು ಆಧರಿಸಿ ಜರ್ಮನಿಯ ಪ್ರಸಿದ್ಧ ನಾಟಕಕಾರ ಬ್ರೆಕ್ಟ್ 'ದಿ ಕಾಕೇಷಿಯನ್ ಚಾಕ್ ಸರ್ಕಲ್' ಎಂಬ ನಾಟಕವನ್ನು ಬರೆದ. ಬ್ರೆಕ್ಟ್‌ನ ಈ ನಾಟಕದ ಮೂಲ 1925ರಲ್ಲಿ ಕ್ಲಾ ಬಂಡ್ ಎಂಬ ಜರ್ಮನ್ ನಾಟಕಕಾರ ಹಳೆಯ ಚೀನೀ ನಾಟಕವನ್ನು ಆಧರಿಸಿ ಬರೆದ 'ದಿ ಚಾಕ್ ಸರ್ಕಲ್' ಎಂಬುದಾಗಿತ್ತು. ಅಂದಿನ ಸೋವಿಯತ್ ದೇಶದ ಕುರಿಸಾಕಾಣಿಕೆ ಹಾಗೂ ಹಣ್ಣುಬೆಳೆಯುವ ಎರಡೂ ಕ್ಷೇತ್ರದವರ ನಡುವೆ ನಡೆದ ವಿವಾದವೇ ಮೂಲ. ಯುದ್ಧದ ಸಂದರ್ಭದಲ್ಲಿ ಜಮೀನು ಬಿಟ್ಟು ತೆರಳಿದ ಇವರು ಯುದ್ಧದ ನಂತರ ಹಿಂತಿರುಗಿ ಜಮೀನಿನ ಒಡೆತನಕ್ಕೆ ಕಾದಾಡುತ್ತಿದ್ದಾರೆ. ನಾಟಕದೊಳಗೊಂದು ನಾಟಕ, ಸುತ್ತಿನಲ್ಲೊಂದು ಸುತ್ತು ಎನ್ನುವಂತಿರುವ ಈ ನಾಟಕಕ್ಕೆ ಹಲವು ಮುಖಗಳಿವೆ. ಕಾಕಸಸ್‌ನ ಜಾರ್ಜಿಯಾ ಪ್ರಾಂತ್ಯದಲ್ಲಿ ಕ್ರಾಂತಿಯಾಗಿ ಗವರ್ನರ್ ಅಧಿಕಾರ ಕಳೆದುಕೊಂಡಿದ್ದಾನೆ. ಈ ದಂಗೆಯಲ್ಲಿ ಬೆದರಿದ ಗವರ್ನರ್ ಹೆಂಡತಿ ಮಗುವನ್ನು ಮರೆತು ಓಡಿಹೋಗಿದ್ದಾಳೆ. ಅವಳ ದಾಸಿ ಗ್ರೂಷಾ ವಿಧಿಯಿಲ್ಲದೆ ಮಗುವನ್ನು ಬಿಡಲಾರದೆ ಎತ್ತಿಕೊಂಡು ಓಡುತ್ತಾಳೆ. ಮಗುವಿನ ರಕ್ಷಣೆಗೆಂದೇ ರೋಗಿಯಾದ ರೈತನನ್ನೊಬ್ಬನನ್ನು ಮದುವೆಯಾಗುತ್ತಾಳೆ. ಅವಳನ್ನು ಹುಡುಕಿ ಬಂದ ಅವಳ ಪ್ರಿಯಕರ ಆ ಮಗುವನ್ನು ಅವಳದೆಂದೇ ಭಾವಿಸಿ ಓಡಿ ಹೋಗುತ್ತಾನೆ. ದಂಗೆಯೆಲ್ಲಾ ಅಡಗಿದ ನಂತರ ಹಿಂತಿರುಗಿದ ಗವರ್ನರ್‌ನ ಹೆಂಡತಿ ಮಗು ನನ್ನದೆಂದು ನ್ಯಾಯಾಲಯಕ್ಕೆ ದೂರು ಕೊಡುತ್ತಾಳೆ.

ಅಲ್ಲಿನ ನ್ಯಾಯಾದೀಶ ಅಜ್ದಕ್ ಹುಚ್ಚು ಹುಚ್ಚಾಗಿ ವರ್ತಿಸಿ ನಗೆಪಾಟಲಿಗೆ ಈಡಾಗಿದ್ದವನು. ಹಿಂದಿನ ನ್ಯಾಯಾಧಿಪತಿಯ ಕೊಲೆಯಾಗಿ ಅರಾಜಕತೆ ಉಂಟಾಗಿರುತ್ತದೆ. ಈ ಹುಚ್ಚು ಗುಮಾಸ್ತನ ತಮಾಷೆ ನೋಡಲೆಂದೇ ಸೈನಿಕರು ನ್ಯಾಯಾಧೀಶನ ಜಾಗದಲ್ಲಿ ಕೂಡಿಸುತ್ತಾರೆ. ಅವನ ಮುಂದೆ ಗವರ್ನರ್ ಹೆಂಡತಿ ಹಾಗೂ ಅವಳ ದಾಸಿಯ ಜಗಳ ಬರುತ್ತದೆ. ಎರಡೂ ಕಡೆಯ ವಾದ ಕೇಳಿದ ಅಜ್ದಕ್ ನೆಲದ ಮೇಲೆ ಸೀಮೆ ಸುಣ್ಣದಿಂದ ಒಂದು ವೃತ್ತವನ್ನು ಬರೆದು ಮಗುವನ್ನು ಮಧ್ಯದಲ್ಲಿ ನಿಲ್ಲಿಸುತ್ತಾನೆ. ಇಬ್ಬರಿಗೂ ಮಗುವನ್ನು ವೃತ್ತದಿಂದಾಚೆ ಎಳೆಯುವಂತೆ ಸೂಚಿಸುತ್ತಾನೆ. ಗವರ್ನರ್ ಹೆಂಡತಿ ಮಗುವನ್ನು ಎಳೆಯುತ್ತಾಳೆ. ಆದರೆ ದಾಸಿ ಮಗುವಿಗೆ ನೋವಾಗುತ್ತದೆಂದು ನೊಂದು ಸುಮ್ಮನೆ ನಿಲ್ಲುತ್ತಾಳೆ. ಅಜ್ದಕ್ ಮಗು ದಾಸಿಗೆ ಸಲ್ಲಬೇಕೆಂದು ತೀರ್ಪು ಕೊಡುತ್ತಾನೆ. ದಾಸಿ ಗ್ರೂಷಾ ಮಗುವಿಗಾಗಿ ಮದುವೆಯಾಗಿದ್ದ ರೈತನಿಂದ ವಿಚ್ಛೇದನ ಕೊಡಿಸುತ್ತಾನೆ. ಗ್ರೂಷಾಳಿಗೆ ಮಗು ಮತ್ತು ಪ್ರೇಮಿ ಇಬ್ಬರೂ ಸಿಕ್ಕುತ್ತಾರೆ. ಕತೆಯ ಅಂತ್ಯದ ನೀತಿಯೆಂದರೆ ಉಳುವವನಿಗಷ್ಟೇ ಭೂಮಿ, ತಾಯ್ತನವಿದ್ದವರಿಗಷ್ಟೇ ಮಕ್ಕಳು ಎಂಬುದಾಗಿದೆ. ಸಮಾಜದ ದೃಷ್ಟಿಯಲ್ಲಿ ಕೆಳಗಿರುವವರೂ ಕೂಡ ಕ್ಲಿಷ್ಟ ಕಾಲದಲ್ಲಿ ತಮ್ಮ ಧೈರ್ಯ, ಸ್ಥೈರ್ಯಗಳಿಂದ ಜೀವವನ್ನು ಉಳಿಸಬಲ್ಲರು. ಒಂದು ಸಮುದಾಯದ ಪರವಾಗಿ, ಒಳಿತಿನ ಪರವಾಗಿ ತಮ್ಮನ್ನು ಆಪತ್ತಿಗೆ ಒಡ್ಡಿ ಕೊಳ್ಳಬಲ್ಲರು ಎಂಬುದಕ್ಕೆ ಇಂತಹ ಹಲವಾರು ಕಥನಗಳು ನಮಗೆ ಕತೆಯ ರೂಪದಲ್ಲಿ ದೊರೆಯುತ್ತವೆ. ತಾಯ್ತನದ ಕಥೆ ಬೈಬಲ್‌ನಲ್ಲಿ ಇರಲಿ ಅಥವಾ ಬ್ರೆಕ್ಟ್ ನಾಟಕದಲ್ಲಿರಲಿ ಅದು ಹೇಳುವುದು ಹೆಣ್ಣಿನ ಕರುಳ ಕಕ್ಕುಲಾತಿಯನ್ನು ಕುರಿತೇ ಆಗಿರುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಒಬ್ಬ ಮೂರ್ಖ ಇನ್ನೊಬ್ಬ ಮೂರ್ಖನನ್ನು ಪ್ರಶಂಸಿಸುತ್ತಾನೆ.
  —ಜರ್ಮನ್ ಗಾದೆ
- ಹೊಸ ಪುಸ್ತಕವೊಂದನ್ನು ನೀವು ನಿಮ್ಮ ಮನೆಗೆ ತಂದಿರೆಂದರೆ, ಹೊಸ ಹಿತೈಷಿಯೊಬ್ಬ ನಿಮ್ಮ ಮನೆಗೆ ಬಂದನೆಂದು ತಿಳಿಯಬೇಕು.
  —ಹಾ.ಮಾ.ನಾಯಕ
- ಬಾಳನ್ನು ಹಸನಾಗಿಸಿಕೊಳ್ಳಬೇಕು. ಪ್ರಹಸನವಾಗಿಸಿಕೊಳ್ಳಬಾರದು.
  —ಕೆ.ಎಸ್. ನಿಸಾರ್ ಅಹಮದ್
- ಮಾನವ ಜನಾಂಗವನ್ನು ಬಂಧುಗಳೆಂದು ನೋಡಬೇಕು.
  —ಕುರಾನ್
- ಕವಿತೆಯೆಂದರೆ ಶಬ್ದಗಳ ಹಂದರವಲ್ಲ, ಜೀವನದೆಡೆಗಿನ ಅನುಸಂಧಾನದ ದೃಷ್ಟಿಕೋನ.
  —ಜೇಮ್ಸ್ ಬ್ರಾಡ್‌ಸ್ಕಿ
- ಎಲ್ಲಿ ಮಾನವ ಬದುಕಬಹುದೋ ಅಲ್ಲಿಯೇ ಅವನು ಸುಂದರವಾಗಿಯೂ ಬದುಕಬಹುದು.
  —ಮಾರ್ಕಸ್ ಅರಿಲಿಯಸ್